ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ.

ವಿಷಯ: ಮೈಸೂರಿನ ಗಾಯಿತ್ರಿಪುರಂನ ಸಮುದಾನ ಭವನ

118 (360)

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂನಿನ ಗಾಯಿತ್ರಿ ಪುರಂನ ಸಮುದಾಯ ಭವನ ನಿರ್ಮಾಣ ಶೇ.60ರಷ್ಟು ನಿರ್ಮಿಸಿ ಸ್ಥಗಿತಗೊಳಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಸಮುದಾಯ ಭವನದ ಕಾಮಗಾರಿಯು ಪೂರ್ಣಗೊಳಿಸುವಲ್ಲಿ ಸರ್ಕಾರದವರು ತೆಗೆದುಕೊಂಡ ಕ್ರಮವೇನು?

ಶ್ರೀ ಮೀರಾಜೂದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಬಂದಿದೆ.

ಆ) ಮೈಸೂರಿನ ಗಾಯಿತ್ರಿ ಪುರಂ ಸಮುದಾಯ ಭವನ ನಿರ್ಮಾಣದ ಕೆಲಸದ ಪೈಕಿ ಉಳಿಕೆ ಕೆಲಸಕ್ಕೆ ಟೆಂಡರನ್ನು ಕರೆದು ಗುತ್ತಿಗೆದಾರರನ್ನು ನಿಗಧಿಪಡಿಸಿದೆ. ಕೆಲಸವನ್ನು ತುರ್ತಾಗಿ ಪ್ರಾರಂಭಿಸಲಾಗುವುದು.

ಶ್ರೀ ಇ.ಮಾರುತಿರಾವ್ ಪವಾರ್: ಮಾನ್ಯ ಅಧ್ಯಕ್ಷರೆ, ಮೈಸೂರಿನ ಗಾಯಿತ್ರಿಪುರಂನ ಸಮುದಾಯ ಭವನದ ಕೆಲಸ 1992ನೇ ಇಸವಿಯಲ್ಲಿಯೇ ನಿಂತು ಹೋಗಿತ್ತು. ಅಲ್ಲಿ ಇನ್ನು ಶೇಕಡ 40ರಷ್ಟು ಕಾಮಗಾರಿ ಕೆಲಸ ಆಗಬೇಕಾಗಿದೆ. ಸರ್ಕಾರ ಉಳಿದ ಕೆಲಸಕ್ಕೆ ಟೆಂಡರ್ ಮಾಡಿ, ಗುತ್ತಿಗೆದಾರರನ್ನು ನಿಗದಿಪಡಿಸಿದ್ದೇವೆಂದು ಹೇಳಿದೆ, ಆದರೆ ಇದುವರೆಗೂ ಅಲ್ಲಿ ಕೆಲಸ ಪ್ರಾರಂಭ ಮಾಡಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಜನರ ಮಧ್ಯೆ ಹೋಗಿ ಏನು ಹೇಳಬೇಕು. ಮಾನ್ಯ ಸಭಾಧ್ಯಕ್ಷರೆ, ನನ್ನ ಹತ್ತಿರ ಈ ಸಮುದಾಯ ಭವನದ ಸಧ್ಯದ ಸ್ಥಿತಿಯ ಫೋಟೋ ಇದೆ, ಬೇಕಾದರೆ ತಮಗೆ ತೋರಿಸುತ್ತೇನೆ.

ಅಧ್ಯಕ್ಷರು: ಫೋಟೋ ಬೇಡ, ತಮ್ಮ ಮೇಲೆ ನನಗೆ ನಂಬಿಕೆ ಇದೆ.

ಶ್ರೀ ಬಿ.ಎನ್.ಬಚ್ಚೇಗೌಡ (ಪೌರಾಡಳಿತ ರಾಜ್ಯ ಸಚಿವರ ಪರವಾಗಿ): ಮೈಸೂರಿನ ಗಾಯಿತ್ರಿ ಪುರಂ ಸಮುದಾಯ ಭವನ ನಿರ್ಮಾಣಕ್ಕೆ 2.5 ಲಕ್ಷ ರೂಪಾಯಿಯ ಅಂದಾಜು ಪಟ್ಟಿಯಲ್ಲಿದೆ. ಈ ಹಣವನ್ನು ನಗರಪಾಲಿಕೆಯವರು ಬಿಡುಗಡೆ ಮಾಡುವುದರಲ್ಲಿ ಸ್ವಲ್ಪ ತಡವಾಗಿದೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಶೇಕಡ

60ರಷ್ಟು ಕಾಮಗಾರಿ ಕೆಲಸ ಮುಗಿದಿದೆ. ಇದಕ್ಕೆ ಮೇಲ್ಚಾವಣಿ ಕಾಂಕ್ರೀಟ್ ಹಾಕುವುದಕ್ಕೋಸ್ಕರ ಈಗಾಗಲೇ ರಿವೈವ್ ಎಸ್ಟಿಮೇಟ್ ಮಾಡಲಾಗಿದೆ. ಈಗ 2 ಲಕ್ಷ ರೂಪಾಯಿ ಖರ್ಚಾಗಿದೆ, ಇನ್ನು 1.80 ಲಕ್ಷ ರೂಪಾಯಿ ಹಾಗೇ ಇದೆ. ಈಗಾಗಲೇ, ಟೆಂಡರ್ ಒಪ್ಪಿಕೊಂಡಿರುವುದರಿಂದ ಆದಷ್ಟು ಬೇಗ ಕೆಲಸವನ್ನು ಪ್ರಾರಂಭ ಮಾಡಿಸುತ್ತೇವೆ.

ವಿಷಯ: ಬೆಳಗಾವಿ ನಗರಕ್ಕೆ ನೀರು ಸರಬರಾಜು ಯೋಜನೆ.

235 (1650)

ಶ್ರೀ ಚಂದ್ರಶೇಖರ್ ನಾಯಕ (ಗೋಕಾಕ್): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಘಟಪ್ರಭಾ ನದಿಯಿಂದ ಬೆಳಗಾವಿ ನಗರಕ್ಕೆ ನೀರು ಸರಬರಾಜು ಮಾಡುವ ಕಾಮಗಾರಿಯ ಕೆಲಸ ಯಾವ ಹಂತದಲ್ಲಿದೆ?

ಆ) ಸದರೀ ಕಾಮಗಾರಿಗೆ ಸರ್ಕಾರದಿಂದ ಭರಿಸಲಾಗಿರುವ ಹಣವೆಷ್ಟು?

ಇ) ಅದರಲ್ಲಿ ಬೆಳಗಾವಿ ಇಂಡಾಲ ಫ್ಯಾಕ್ಟರಿಯಿಂದ ಸಂದಾಯವಾದ ಹಣವೆಷ್ಟು?

ಈ) ಇಂಡಾಲ ಫ್ಯಾಕ್ಟರಿಗೆ ಕೊಡುವ ನೀರಿನ ದರವೆಷ್ಟು?

ಉ) ಅವರಿಗೆ ಕಚ್ಚಾ ನೀರಿನ ಧಾರಣೆ ಆರಂಭಿಸಲಾಗಿದೆಯೇ?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಈ ಯೋಜನೆಯ ವಿವಿಧ ಕಾಮಗಾರಿಗಳಲ್ಲಿ ಹಲವು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಒಳ್ಳೆಯ ಪ್ರಗತಿಯಲ್ಲಿದೆ.

ಆ) ಸದರಿ ಯೋಜನೆಯ ಪರಿಷ್ಕೃತ ಅಂದಾಜಿಗೆ ಸರ್ಕಾರವು ಅನುಮೋದನೆ ಕೊಟ್ಟಿರುವ ಆಧಿಸೂಚನೆಯ ಪ್ರಕಾರ, ರೂ. 1070.98 ಲಕ್ಷಗಳನ್ನು ಸರ್ಕಾರವು ಅನುದಾನವಾಗಿ ಕೊಡಬೇಕಾಗಿರುತ್ತದೆ.

ಇ) ಈ ಯೋಜನೆಗೆ ಇಲ್ಲಿಯವರೆಗೆ ಇಂಡಾಲ ಕಂಪನಿಯಿಂದ ರೂ. 600.00 ಲಕ್ಷಗಳನ್ನು ಮಂಡಲಿಗೆ ಸಂದಾಯ ಮಾಡಿರುತ್ತಾರೆ.

ಈ) ಸದರೀ ಯೋಜನೆಯ ಕಾಮಗಾರಿಗಳನ್ನು ಮುಗಿಸಿದ ನಂತರ, ಒಟ್ಟಾರೆ ಖರ್ಚು ಮಾಡಿದ ವೆಚ್ಚವನ್ನು ಮತ್ತು ಇಂಡಾಲ ಕಂಪನಿಯ ನೀರಿನ ಬಳಕೆಯನ್ನು ಆಧರಿಸಿ, ದರವನ್ನು ನಿಗಧಿಪಡಿಸಲಾಗುವುದು.